JULY 20, 2024

# AKASHAVANI - DHARWAD

## PRADESH SAMACHARA (KANNADA) 7:05 AM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

- ನಿಗಮ–ಮಂಡಳಿಗಳು; ಕ್ರಿಯಾ ಯೋಜನೆ ಸಿದ್ಧ ಪಡಿಸಿ, ಯೋಜನಾವಾರು ವೆಚ್ಚ ನಮೂದಿಸಿದರೆ ಮಾತ್ರ, ಹಣ ಬಿಡುಗಡೆ – ಮುಖ್ಯಮಂತ್ರಿ, ಸ್ಪಷ್ಟನೆ.
- ಮಳೆ ಮತ್ತು ಪ್ರವಾಹ; ಬೆಳಗಾವಿ ಸೇರಿ, ಆರು ಜಿಲ್ಲೆಗಳಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ ನಿಯೋಜನೆ – ಸಚಿವ ಕೃ ್ಣ ಬೈರೇಗೌಡ, ಮಾಹಿತಿ.
- 'ಸಂಪೂರ್ಣತಾ ಅಭಿಯಾನ'; ವಿಜಯಪುರ ಜಿಲ್ಲೆ, ತಾಳಿಕೋಟೆಯಲ್ಲಿ ಜನ ಜಾಗ್ರತಿ – ಸಿ.ಇ.ಓ. ರಿಷಿ ಆನಂದ್, ಹೇಳಿಕೆ.
- ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, 135ನೇ ಸಂಸ್ಥಾಪನಾ ದಿನಾಚರಣೆ; ಇಂದಿನಿಂದ 9 ದಿನಗಳ ಕಾಲ, ವಿಶೇಷ ಕಾರ್ಯಕ್ರಮ.

<><><>

ಈಗ ವಾರ್ತೆಗಳ ವಿವರ

<><><>

ವಿವಿಧ ಅಭಿವೃದ್ಧಿ ನಿಗಮಗಳಿಗೆ ಬಿಡುಗಡೆ ಮಾಡಿದ್ದ ಹಣವನ್ನು, ಸರ್ಕಾರದ ಖಜಾನೆಗೆ ವಾಪಸ್ ಪಡೆಯಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಪಡಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ರಿಯಾ ಯೋಜನೆ ಸಿದ್ಧ ಪಡಿಸಿ, ಯೋಜನಾವಾರು ಮೊತ್ತ ನಮೂದಿಸಿದ್ದರೆ, ಆ ಹಣವನ್ನು ಸಂಬಂಧಿಸಿದ ನಿಗಮಗಳಿಗೆ ಬಿಡುಗಡೆ ಮಾಡಲಾಗುವುದು ಎಂದು, ಅವರು ತಿಳಿಸಿದರು. ಮಹರ್ಷಿ ವಾಲ್ಮೀಕಿ ನಿಗಮದ ಹಣದ ಅವ್ಯವಹಾರಕ್ಕೆ, ಅಲ್ಲಿನ ವ್ಯವಸ್ಥಾಪಕ ನಿರ್ದೇಶಕ ಸೇರಿದಂತೆ, ಹಿರಿಯ ಅಧಿಕಾರಿಗಳು ಹಾಗೂ ಹಣ ವರ್ಗಾವಣೆಯಾದ ಬ್ಯಾಂಕ್‌ನ ಅಧಿಕಾರಿಗಳೇ ನೇರ ಹೊಣೆ ಎಂದು, ಮುಖ್ಯಮಂತ್ರಿ ಹೇಳಿದರು. ವಿಶೇಷ ತನಿಖಾ ತಂಡ, 12 ಮಂದಿಯನ್ನು ಬಂಧಿಸಿದೆ. ಖಾಸಗಿ ಬ್ಯಾಂಕ್‌ನಲ್ಲಿರುವ 46 ಕೋಟಿ ರೂಪಾಯಿ ಮೇಲೆ, ಎಸ್.ಐ.ಟಿ. ಹಕ್ಕು ಸಾಧಿಸಿದೆ. ಸುಮಾರು 85 ಕೋಟಿ ರೂಪಾಯಿಯಷ್ಟು ಹಣ ವಾಪಸ್ ಬರಲಿದೆ

ಎಂದು ಅವರು ನುಡಿದರು. ಆತ್ಮಹತ್ಯೆ ಮಾಡಿಕೊಂಡ, ನಿಗಮದ ಅಧಿಕಾರಿ ಚಂದ್ರಶೇಖರನ್ ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, 25 ಲಕ್ಷ ರೂಪಾಯಿ ಸರ್ಕಾರ ಪ್ರಕಟಿಸಿದೆ.

<><><>

ಬೆಳಗಾವಿ ಮತ್ತು ಮಲೆನಾಡು ಜಿಲ್ಲೆಗಳು ಸೇರಿದಂತೆ, ಪ್ರವಾಹ ಪರಿಸ್ಥಿತಿ ಎದುರಾಗುವ ಆರು ಜಿಲ್ಲೆಗಳಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡಗಳನ್ನು ನಿಯೋಜಿಸಲಾಗಿದೆ ಎಂದು, ಕಂದಾಯ ಖಾತೆ ಸಚಿವ ಕೃ ್ಣ ಬೈರೇಗೌಡ ಮಾಹಿತಿ ನೀಡಿದ್ದಾರೆ. ವಿಧಾನಸಭೆಯಲ್ಲಿ, ಮಳೆ ಹಾನಿ ಕುರಿತ ಚರ್ಚೆಗೆ ಉತ್ತರಿಸಿದ ಸಚಿವರು, 29 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ರಾಜ್ಯ ವಿಕೋಪ ಪರಿಹಾರ ನಿಧಿ ಮಾರ್ಗಸೂಚಿ ಪ್ರಕಾರ, ಪರಿಹಾರ ವಿತರಿಸಲು ಸೂಚಿಸಲಾಗಿದೆ ಎಂದರು. ರಾಜ್ಯಾದ್ಯಂತ ಎಲ್ಲ ಜಿಲ್ಲಾಡಳಿತಗಳಿಗೆ, ಮಳೆ ಹಾನಿ ತುರ್ತು ಪರಿಹಾರ ಕಾರ್ಯಗಳಿಗಾಗಿ, 774 ಕೋಟಿ 50 ಲಕ್ಷ ರೂಪಾಯಿ ಒದಗಿಸಲಾಗಿದೆ. ಸಕಲೇಶಪುರ ಹಾಗೂ ಕೊಡಗಿನಲ್ಲಿ ರಾತ್ರಿ ರಸ್ತೆ ಸಂಚಾರ ನಿರ್ಬಂಧಿಸಲಾಗಿದೆ ಎಂದು ಸಚಿವ ಕೃ ್ಣ ಬೈರೇಗೌಡ ಹೇಳಿದರು.

<><><>

ಪಶ್ಚಿಮಘಟ್ಟದಲ್ಲಿ ಭೂ ಮತ್ತು ಗುಡ್ಡಗಳ ಕುಸಿತ, ಕಳವಳಕಾರಿ ವಿದ್ಯಮಾನ ಎಂದು, ಪರಿಸರ ತಜ್ಞರು ಕಳವಳ ವ್ಯಕ್ತ ಪಡಿಸಿದ್ದಾರೆ. ಪಶ್ಚಿಮಘಟ್ಟದಲ್ಲಿ ಉಗಮವಾಗುವ ನದಿಗಳ ಧಾರಣಾ ಶಕ್ತಿ ಮೀರಿ, ನೀರಾವರಿ ಯೋಜನೆಗಳ ಅನುಷ್ಠಾನ, ಪಶ್ಚಿಮ ಘಟ್ಟದ 'ಮಳೆ ಕಾಡು' ಕ್ಷೀಣಿಸಿ, ಹುಲ್ಲುಗಾವಲು ಮತ್ತು ಶೋಲಾ ಅಡವಿ ಮಧ್ಯದ, ನೈಸರ್ಗಿಕ ಬಂಧದಲ್ಲಿ ಬಿರುಕು ಮೂಡಿಸಿದೆ ಎಂದಿದ್ದಾರೆ. ಜೀವ ವೈವಿಧ್ಯ ಮಂಡಳಿ ಅಧ್ಯಕ್ಷರಾಗಿದ್ದ ಅನಂತ ಹೆಗಡೆ ಅಶೀಸರ ನೇತೃತ್ವದಲ್ಲಿ, ತಜ್ಞರ ಸಮಿತಿ, ವೈಜ್ಞಾನಿಕ ಅಧ್ಯಯನ ಕೈಗೊಂಡು, ಪರಿಹಾರ ಸೂಚಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಪ್ರದೇಶ ಸಮಾಚಾರಕ್ಕಾಗಿ ಅವರು ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಅನಂತ ಹೆಗಡೆ, ಅಶೀಸರ 40 ಸೆಕೆಂದುಗಳು

<><><>

ಧಾರವಾಡ ಜಿಲ್ಲೆಯ ಕುಂದಗೋಳ, ಹುಬ್ಬಳ್ಳಿ, ಅಣ್ಣಿಗೇರಿ, ನವಲಗುಂದ ಹಾಗೂ ಧಾರವಾಡ ತಾಲೂಕಿನಲ್ಲಿ, ಬೆಣ್ಣಿ ಹಳ್ಳ ಹಾಗೂ ತುಪ್ಪರಿ ಹಳ್ಳಗಳು ಮಳೆಯಿಂದಾಗಿ ಉಕ್ಕಿ ಹರಿದು, 56 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ, ಪ್ರವಾಹ ಸದೃಷ ಪರಿಸ್ಥಿತಿ ಉಂಟಾಗುತ್ತದೆ ಎಂದು ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಅಂಕೋಲಾ ತಾಲೂಕಿನ ಶಿರೂರಿನಲ್ಲಿ, ಗುಡ್ಡ ಕುಸಿದ ಅವಘಡದಲ್ಲಿ ಮೃತಪಟ್ಟ, ವ್ಯಕ್ತಿಯೋರ್ವರ ಶವ ಬೆಳಂಬಾರ ಕಡಲತೀರದಲ್ಲಿ ಪತ್ತೆಯಾಗಿದೆ. ಸಾವನ್ನಪ್ಪಿದವರ ಸಂಖ್ಯೆ 7 ಕ್ಕೆ ಏರಿದೆ. ಈ ದುರ್ಘಟನೆಯಲ್ಲಿ ಕಾಣೆಯಾದವರ ಶೋಧ ಕಾರ್ಯ, ಮುಂದುವರೆದಿದೆ.

<><><>

ನದಿಗೆ ಉರುಳಿದ್ದ ಟ್ಯಾಂಕರ್‌ನಿಂದ 15 ಟನ್ ಗ್ಯಾಸ್‌ನ್ನು ಸುರಕ್ಷಿತವಾಗಿ, ಬಿಡುಗಡೆ ಗೊಳಿಸಲಾಗಿದೆ. ಗ್ರಾಮಸ್ಥರು ತಮ್ಮ ಮನೆಗಳಿಗೆ ಮರಳುವಂತೆ, ಜಿಲ್ಲಾಧಿಕಾರಿ ಕೋರಿದ್ದಾರೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇಂದು ಭೇಟಿ ನೀಡಲಿದ್ದಾರೆ. ಶಾಲೆ ಹಾಗೂ ಪಿ.ಯೂ. ಕಾಲೇಜುಗಳಿಗೆ ಇಂದು ರಜೆ ಘೋಷಿಸಲಾಗಿದೆ.

<><><>

ಯಾದಗಿರಿ ಜಿಲ್ಲೆ ಹುಣಸಗಿ ತಾಲೂಕಿನ, ನಾರಾಯಣಪುರ ಗ್ರಾಮದ, ಬಸವಸಾಗರ ಜಲಾಶಯದಿಂದ, ಕೃಷ್ಣ ನದಿ ಪಾತ್ರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹರಿಬಿಡಲಾಗುತ್ತಿದ್ದು, ಅಣೆಕಟ್ಟೆಯ ಕೆಳ ಭಾಗದ ಗ್ರಾಮಗಳ ಜನ ಮುಂಜಾಗ್ರತೆ ವಹಿಸುವಂತೆ, ಕೋರಲಾಗಿದೆ.

<><><>

ಸತತ ಮಳೆ ಹಿನ್ನೆಲೆ, ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಇಂದು ರಜೆ ಘೋಷಿಸಲಾಗಿದೆ.

<><><>

ದಾವಣಗೆರೆ ಜಿಲ್ಲೆ, ಹರಿಹರದ ಗಂಗಾ ನಗರದ ಬಳಿ, ತುಂಗಾ ನದಿ ಅಪಾಯ ಮಟ್ಟದಲ್ಲಿ ಹರಿಯುತ್ತಿದ್ದು, ಎ.ಪಿ.ಎಂ.ಸಿ. ಭವನದ ಕಾಳಜಿ ಕೇಂದ್ರಕ್ಕೆ ತೆರಳಲು, ಜನರಿಗೆ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಮನವಿ ಮಾಡಿದ್ದಾರೆ.

<><><>

ಹಾವೇರಿ ಜಿಲ್ಲೆ, ಸವಣೂರು ತಾಲೂಕು ಮಾದಾಪುರ ಗ್ರಾಮದಲ್ಲಿ, ಮೇಲ್ಛಾವಣಿ ಮನೆಯ ಛಾವಣಿ, ಸತತ ಮಳೆಗೆ ಕುಸಿದು ಸ್ಥಳದಲ್ಲಿಯೇ, ಅವಳಿ ಮಕ್ಕಳು ಹಾಗೂ ಮಹಿಳೆ ಮೃತಪಟ್ಟ ಹಿನ್ನೆಲೆ, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಕಂಬನಿ ಮಿಡಿದಿದ್ದಾರೆ. ಮೂವರು ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಮೃತರ ಕುಟುಂಬಕ್ಕೆ, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ನಿಯಮಗಳಡಿ, ತಲಾ ಐದು ಲಕ್ಷ ರೂಪಾಯಿ ಪರಿಹಾರ ಘೋಷಿಸಲಾಗಿದೆ.

<><><>

ಸಂಸದ ಬಸವರಾಜ ಬೊಮ್ಮಾಯಿ, ಸ್ಥಳಕ್ಕೆ ಭೇಟಿ ನೀಡಿ, ಸಾಂತ್ವನ ಹೇಳಿ, ಕುಟುಂಬದ ಆಶ್ರಿತರಿಗೆ ಹಾಗೂ ಗಾಯಾಳುಗಳಿಗೆ, ತಲಾ 50 ಸಾವಿರ ರೂಪಾಯಿ ನೆರವು ನೀಡಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರ ನೀತಿ ಆಯೋಗದ ಸಾರಥ್ಯದಲ್ಲಿ, ಅನುಷ್ಠಾನಗೊಂಡಿರುವ 'ಸಂಪೂರ್ಣತಾ ಅಭಿಯಾನ'ದ ಹಿನ್ನೆಲೆ, ವಿಜಯಪುರ ಜಿಲ್ಲೆಯ ಆಶೋತ್ತರ ತಾಲೂಕಾಗಿ, ತಾಳಿಕೋಟೆ ಆಯ್ಕೆಯಾಗಿದೆ. ಸುಸ್ಥಿರ ಅಭಿವೃದ್ಧಿಯ ಮಾನದಂಡಗಳಡಿ, ಶೇಕಡ ನೂರರಷ್ಟು ಅಭಿವೃದ್ಧಿ ಸಾಧಿಸಿ, ಈ ತಾಲೂಕಿನ ಅರ್ಹ ಫಲಾನುಭವಿಗಳ ಜೀವನ ಮಟ್ಟವನ್ನು ಸುಧಾರಿಸಲು, ಕ್ರಮ ಕೈಗೊಳ್ಳಲಾಗಿದೆ. ಪ್ರದೇಶ ಸಮಾಚಾರಕ್ಕಾಗಿ, 'ಸಂಪೂರ್ಣತಾ ಅಭಿಯಾನ'ದ ಅನುಷ್ಠಾನ ಕ್ರಮಗಳ ಕುರಿತು, ಹೆಚ್ಚಿನ ಮಾಹಿತಿ ನೀಡಿದ್ದಾರೆ, ವಿಜಯಪುರ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಿಷಿ ಆನಂದ್.

<><><>

ಜಿ.ಪಂ. ಸಿಇ.ಓ ರಿಷಿ ಆನಂದ್ 50 ಸೆಕೆಂದುಗಳು

<><><>

ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ.ಯ ಐದನೇ ಘಟಿಕೋತ್ಸವ, ಸೋಮವಾರ ಜುಲೈ 22 ರಂದು ನಡೆಯಲಿರುವುದಾಗಿ, ಐ.ಐ.ಟಿ. ನಿರ್ದೇಶಕ ಪ್ರೊಫೆಸರ್ ವೆಂಕಪಯ್ಯ ಆರ್.ದೇಸಾಯಿ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಅವರು, ಐ.ಐ.ಟಿ.ಯ ಕೇಂದ್ರೀಯ ಕಲಿಕಾ ಸಭಾಂಗಣದಲ್ಲಿ ಮಧ್ಯಾಹ್ನ 3.30ಕ್ಕೆ, ಘಟಿಕೋತ್ಸವ ಸಮಾರಂಭ ಜರುಗಲಿದೆ. ಅಮೆರಿಕಾದ ಖಗೋಳ ಮತ್ತು ಗ್ರಹ ವಿಜ್ಞಾನ ಪ್ರಾಧ್ಯಾಪಕ ಶ್ರೀನಿವಾಸ ಕುಲಕರ್ಣಿ ಘಟಿಕೋತ್ಸವ ಭಾಷಣ ಮಾಡುವರು ಎಂದರು.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ತನ್ನ 135ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ, ಇಂದಿನಿಂದ 9 ದಿನಗಳ ಕಾಲ, ವಿಶೇಷ ಕಾರ್ಯಕ್ರಮ ಆಯೋಜಿಸಿದೆ. ಇಂದು ಸಂಜೆ 5.30ಕ್ಕೆ, ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ, ವಿಧಾನಸಭೆ ವಿಪಕ್ಷ ಉಪ ನಾಯಕ, ಅರವಿಂದ ಬೆಲ್ಲದ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. 'ಕನ್ನಡ ಪ್ರಪಂಚ ಡಾಕ್ಟರ್ ಪಾಟೀಲ ಪುಟ್ಟಪ್ಪ ಪ್ರಶಸ್ತಿ'ಯನ್ನು, ಬೆಳಗಾವಿಯ ಕನ್ನಡಮ್ಮ ದಿನ ಪತ್ರಿಕೆಗೆ, ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆಯ ವಿಸ್ತರಣಾ ನಿರ್ದೇಶಕ, ಪ್ರೊಫೆಸರ್ ಎಸ್.ಎಂ. ಶಿವಪ್ರಸಾದ್ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿ 50 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

<><><>

ನಾಡಿದ್ದು, 22ನೇ ತಾರೀಖು, ಸೋಮವಾರದಿಂದ, ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ, ಸರ್ಕಾರಿ ಮಾಂಟೆಸ್ಸರಿ ತರಗತಿ ಕಾಯಾರಂಭಿಸಲಿವೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ. ವಿಧಾನ ಪರಿಷತ್ತಿನ ಪ್ರಶ್ನೋತ್ತರ ವೇಳೆಯಲ್ಲಿ, ಮಾತನಾಡಿದ ಸಚಿವರು, ಸದ್ಯದಲ್ಲೇ, ಅಂಗನವಾಡಿ ಶಿಕ್ಷಕಿಯರ ನೇಮಕಾತಿ ಪ್ರಕ್ರಿಯೆ ಜರುಗಲಿದೆ. ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಅವರನ್ನು ಒಳಗೊಂಡ, ಜಿಲ್ಲಾ ಮಟ್ಟದ ಸಮಿತಿ ನೇಮಕಾತಿ ಕೈಗೊಳ್ಳಲಿದೆ ಎಂದರು. ಅಂಗನವಾಡಿ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ, ಸೂಕ್ತ ಮುಂಜಾಗ್ರತೆ ವಹಿಸಲಾಗಿದೆ ಎಂದು, ಹೆಬ್ಬಾಳ್ಕರ ಸದನಕ್ಕೆ ತಿಳಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಂಡ್ಯದಲ್ಲಿ ಡಿಸೆಂಬರ್ 20, 21, 22 ರಂದು ನಡೆಯಲಿರುವ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲಾಂಛನವನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು.

<><><>

ಉತ್ತರ ಪ್ರದೇಶದ ವಾರಾಣಸಿಯ, ಕಾಶಿ ಪೀಠ ಪ್ರದಾನ ಮಾಡುವ, 'ಶ್ರೀಮತಿ ಮಾಲತಿ ಮಹಾರುದ್ರಪ್ಪ ಷೇಣಿ ಮಾತೃಶಕ್ತಿ ರಾಷ್ಟ್ರೀಯ ಪುರಸ್ಕಾರ'ಕ್ಕೆ ಧಾರವಾಡದ ಕವಿತಾ ಗುರುಸಿದ್ಧಯ್ಯ ಹಿರೇಮಠ ಆಯ್ಕೆಯಾಗಿದ್ದಾರೆ.

<><><>

ಚಿಕ್ಕಮಗಳೂರು ನಗರಸಭೆ, ಕಂದಾಯ ಹಣ ಸಂಗ್ರಹಿಸುವಲ್ಲಿ, ರಾಜ್ಯಕ್ಕೆ 2ನೇ ಸ್ಥಾನ ಗಳಿಸಿದೆ. ಕೇಂದ್ರ ಸರ್ಕಾರ ಅಭಿನಂದಿಸಿ, 6 ಕೋಟಿ ರೂಪಾಯಿ ಅನುದಾನ ಮಂಜೂರು ಮಾಡಿದೆ ಎಂದು, ನಗರಸಭೆ ಅಧ್ಯಕ್ಷ ವೇಣುಗೋಪಾಲ ತಿಳಿಸಿದ್ದಾರೆ.

<><><>

ರೈತರ ಬೇಡಿಕೆಗಳ ಕುರಿತು, ಸಂಸತ್ತಿನಲ್ಲಿ ವಿಶೇ ೕ ಮಸೂದೆಯನ್ನು ಮಂಡಿಸುವಂತೆ, ಕೋಲಾರ ಸಂಸದ ಎಂ.ಮಲ್ಲೇಶ್ ಬಾಬು ಅವರಿಗೆ, ಸಂಯುಕ್ತ ಕಿಸಾನ್ ಮೋರ್ಚಾ ಪದಾಧಿಕಾರಿಗಳ ನಿಯೋಗ ಮನವಿ ಸಲ್ಲಿಸಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ಈ ತಿಂಗಳ 28 ರಂದು, ಆಕಾಶವಾಣಿಯಲ್ಲಿ ತಮ್ಮ ಮನ್ ಕಿ ಬಾತ್ ಕಾರ್ಯಕ್ರಮ ಪ್ರಸ್ತುತ ಪಡಿಸಲಿದ್ದಾರೆ.

<><><>

ಖೇಲೋ ಇಂಡಿಯಾ ಅಡಿ, ಉದಯೋನ್ಮುಖ ಪ್ರತಿಭೆಗಳ ಗುರುತಿಸುವಿಕೆ ಯೋಜನೆಗೆ, ಕೇಂದ್ರ ಕ್ರೀಡಾ ಖಾತೆ ಸಚಿವ ಮನ್ಸುಖ್ ಮಾಂಡವಿಯಾ ದಿಲ್ಲಿಯಲ್ಲಿ ಚಾಲನೆ ನೀಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ನಿಗಮ–ಮಂಡಳಿಗಳು; ಕ್ರಿಯಾ ಯೋಜನೆ ಸಿದ್ಧ ಪಡಿಸಿ, ಯೋಜನಾವಾರು ವೆಚ್ಚ ನಮೂದಿಸಿದರೆ ಮಾತ್ರ, ಹಣ ಬಿಡುಗಡೆ – ಮುಖ್ಯಮಂತ್ರಿ, ಸ್ಪಷ್ಟನೆ.
- ಮಳೆ ಮತ್ತು ಪ್ರವಾಹ; ಬೆಳಗಾವಿ ಸೇರಿ, ಆರು ಜಿಲ್ಲೆಗಳಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ ನಿಯೋಜನೆ – ಸಚಿವ ಕೃ ್ಣ ಬೈರೇಗೌಡ, ಮಾಹಿತಿ.
- 'ಸಂಪೂರ್ಣತಾ ಅಭಿಯಾನ'; ವಿಜಯಪುರ ಜಿಲ್ಲೆ, ತಾಳಿಕೋಟೆಯಲ್ಲಿ ಜನ ಜಾಗ್ರತಿ – ಸಿ.ಇ.ಓ. ರಿಷಿ ಆನಂದ್, ಹೇಳಿಕೆ.
- ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, 135ನೇ ಸಂಸ್ಥಾಪನಾ ದಿನಾಚರಣೆ; ಇಂದಿನಿಂದ 9 ದಿನಗಳ ಕಾಲ, ವಿಶೇಷ ಕಾರ್ಯಕ್ರಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>